## ಬಿಗ್‌ಬಾಸ್‌ನಲ್ಲಿ ರಂಜಿಸಿದ ಗೂಸಾ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಬಿಗ್ ಬಾಸ್' ಎಂಬ ಮನರಂಜನಾ ಕೂಟ ಯಾವ ಹಿನ್ನೆಲೆಯಲ್ಲಿ ಆಯೋಜಿಸಲ್ಪಟ್ಟಿದೆ ಎಂದು ಅರ್ಥವಾಗುತ್ತಿಲ್ಲ. ಕಾರ್ಯಕ್ರಮದಲ್ಲಿ ಪಾತ್ರ ವಹಿಸುವ ಕಲಾವಿದರೆಲ್ಲ 'ಬಿಗ್ ಬಾಸ್' ಮನೆಯಲ್ಲಿಯೇ ಮೂರು ತಿಂಗಳ ಗೃಹಬಂಧನದಲ್ಲಿರಬೇಕೆಂಬ ಷರತ್ತು ಸಹ ವಿಚಿತ್ರವೆನ್ನಬಹುದು. ಇತ್ತೀಚೆಗೆ ಸಂಯುಕ್ತ ಎನ್ನುವ ನಟಿ ಕಾರ್ಯಕ್ರಮದ ಪಾತ್ರಧಾರಿಗೆ ಯದ್ವಾತದ್ವಾ ಗೂಸಾ ಕೊಟ್ಟಿರುವುದು ಹಾಗೂ ಗೂಸಾ ತಿಂದ ಸಮೀರ್ ಆಚಾರ್ಯ ಎನ್ನುವವರು ಕಮಕ್ ಕಿಮಕ್ ಎನ್ನದೆ ಗೂಸಾ ಸ್ವೀಕರಿಸಿರುವುದು ಅಚ್ಚರಿಯ ವಿಷಯ. ಬಿಗ್ ಬಾಸ್ ಮನೆಯಲ್ಲಿ ಸಮೀರ ಆಚಾರ್ಯರು ಮಡಿ ಆಚಾರ್ಯರೆಂದೇ ಗುರುತಿಸಲ್ಪಟ್ಟಿದ್ದು, ಸ್ವತಹ ಅಲ್ಲಿ ಅಡುಗೆ ಮಾಡಿಕೊಂಡು ಊಟ ಮಾಡುವ ನಿಯಮಕ್ಕೆ ಬದ್ಧರಾಗಿ ನಡೆದುಕೊಂಡಿರುವುದೂ ಅಚ್ಚರಿಯ ವಿಷಯ. ಪಡ್ಡೆ ವೀಕ್ಷಕರ ಅಚ್ಚುಮೆಚ್ಚಿನ ಕಾರ್ಯಕ್ರಮವಿದೆಂದು ಕಹಳೆ ಊದಲಾಗುತ್ತಿದೆ. ಪ್ರಾಯಶಃ ಗೂಸಾ ಕೊಡುವುದೂ ಕಾರ್ಯಕ್ರಮದ ಅಂಗವೇ ಆಗಿರಬಹುದಲ್ಲವೇ! ಒಟ್ಟಾರೆ ಗೂಸಾ ಕೊಡುವ ಮತ್ತು ಸ್ವೀಕರಿಸಿದ ದೃಶ್ಯ, ಮತ್ತದರ ವಿವರಣೆ ವೀಕ್ಷರನ್ನು ರಂಜಿಸಿತು.

—ಕೋಟೀಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

ವಾರದ ಪತ್ರ

## ಸಾಮಾಜಿಕ ಕಳಕಳಿ ಇರಲಿ!

ಖಾಸಗಿ ದೂರದರ್ಶನ ವಾಹಿನಿಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳಿಗೆ ಸೆನ್ಸಾರ್ ಮಂಡಳಿಯೇ ಇಲ್ಲ ಎನಿಸುತ್ತದೆ. ಲಂಗು ಲಗಾಮಿಲ್ಲದ ಕಾರ್ಯಕ್ರಮಗಳು ಮಕ್ಕಳ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತಿವೆ ಎಂದು ಇತ್ತೀಚೆಗೆ ನಡೆದ ಘಟನೆಯಿಂದ ಸಾಬೀತಾಗಿದೆ. ಆದರೆ ಇಲ್ಲಿ ಪೋಷಕರ ಜವಾಬ್ದಾರಿ ಸಹ ಮುಖ್ಯ ಎನಿಸುತ್ತದೆ. ಮಕ್ಕಳು ನೋಡಬಾರದ ಕಾರ್ಯಕ್ರಮಗಳನ್ನು ಮಕ್ಕಳೊಂದಿಗೆ ಕುಳಿತು ನೋಡುವುದು ಮತ್ತು ಅದರ ಬಗ್ಗೆ ಮಾತನಾಡುವುದು ಸರಿಯಲ್ಲ. ಸಾಮಾಜಿಕ ಕಳಕಳಿಯೇ ಇಲ್ಲದ ಅನೈತಿಕ ಕಥೆಗಳು ಜಾಸ್ತಿಯಾಗಿವೆ. ಇವು ಜನರನ್ನು ಜಾಗೃತಗೊಳಿಸುವ ಬದಲು ಕೆಡಕುಂಟು ಮಾಡುತ್ತಿವೆ.

ಸಮಾಜದ ಶಾಂತಿ ಕದಡುವ ಸುದ್ದಿ ಹಾಗೂ ಕಾರ್ಯಕ್ರಮದ ಮೇಲೆ ನಿಯಂತ್ರಣ ಹೇರಬೇಕು. ಖಾಸಗಿ ಟಿ.ವಿ. ಚಾನೆಲ್ ಕಾರ್ಯಕ್ರಮಗಳಿಗೆ ನಿಯಂತ್ರಣ ಹೇರುವ ದೆಸೆಯಲ್ಲಿ ಈಗಿರುವ ಕಾಯ್ದೆ ಇನ್ನಷ್ಟು ಪರಿಣಾಮಕಾರಿಯಾಗಬೇಕು. ಖಾಸಗಿ ಟಿ.ವಿ. ವಾಹಿನಿಗಳು ಸ್ವಯಂ ನಿಯಂತ್ರಣ ಹೇರಿಕೊಳ್ಳಬೇಕು. ಜಾಹೀರಾತು, ವಾರ್ತೆಗಳು ಮತ್ತು ಧಾರಾವಾಹಿಗಳಿಗೆ ಸೆನ್ಸಾರ್ ಮಂಡಳಿ ನಿಯಮ ಅನ್ವಯವಾಗಬೇಕು.

—ವೀಣಾ ಶಂಕರ್, ಬೆಂಗಳೂರು

## ಆಹ್ಲಾದಕರ 'ಶುಭೋದಯ..'

ಚಂದನ ದೂರದರ್ಶನ ಕರ್ನಾಟಕದಲ್ಲಿ ಪ್ರಾರಂಭವಾಗಿ ಮೂವತ್ತಾರು ವರ್ಷಗಳನ್ನು ಪೂರೈಸುತ್ತಿರುವ ಈ ಸಂದರ್ಭದಲ್ಲಿ 'ಶುಭೋದಯ ಕರ್ನಾಟಕ' ಎಂಬ ವಿನೂತನ ಕಾರ್ಯಕ್ರಮವನ್ನು ತನ್ನ ವೀಕ್ಷಕ ವೃಂದಕ್ಕೆ ಉಣಬಡಿಸುತ್ತಿರುವುದು ಸ್ತುತ್ಯರ್ಹ. ಪ್ರತಿ ದಿನ ಬೆಳಿಗ್ಗೆ ಏಳು ಗಂಟೆಗೆ ಪ್ರಾರಂಭವಾಗುವ ಈ ಕಾರ್ಯಕ್ರಮ ಸುಮಾರು ಎರಡು ಗಂಟೆ ಕಾಲ ವೀಕ್ಷಕರು ತಮ್ಮೆಲ್ಲ ಕಾರ್ಯಕ್ರಮಗಳನ್ನು ಬದಿಗಿಟ್ಟು ವೀಕ್ಷಿಸುವಂತೆ ಮಾಡಿದೆ. ಈ ಕಾರ್ಯಕ್ರಮದಲ್ಲಿ ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ, ಕ್ರೀಡೆ ಹೀಗೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ, ಮಾಡುತ್ತಿರುವ ದಿಗ್ಗಜರ ಸಂದರ್ಶನ ಪ್ರಸಾರವಾಗುತ್ತದೆ. ಅವರ ಪರಿಚಯಾತ್ಮಕ ಕಾರ್ಯಕ್ರಮದ ಜೊತೆಗೆ ಈ ಹಿಂದೆ ಇದ್ದಂತಹ ದಿಗ್ಗಜರ ಸಂದರ್ಶನ, ಸಾಧನೆಗಳನ್ನು 'ನೆನಪಿನ ಅಂಗಳ' ಶೀರ್ಷಿಕೆಯಡಿ ಪ್ರಸಾರ ಮಾಡುತ್ತಿರುವುದು ಇತರೆ ಖಾಸಗಿ ಚಾನೆಲ್‌ಗಳಿಗೆ ಒಂದು ಪಾಠದಂತಿದೆ. ದಿನ ಬೆಳಗಾದರೆ ಊಸರವಳ್ಳಿಯ, ಗೋಮುಖ ವ್ಯಾಘ್ರಗಳ ರಾಜಕಾರಣಿಗಳ ಅಸಭ್ಯ, ಅನುಚಿತ ವರ್ತನೆ ನೋಡಿ ಇತ್ತೀಚಿನ ದಿನಗಳಲ್ಲಿ ರೋಸಿ ಹೋಗಿರುವ ನಮ್ಮಂತಹವರಿಗೆ 'ಶುಭೋದಯ ಕರ್ನಾಟಕ' ಚಂದನ ದೂರದರ್ಶನದ ಒಂದು ಒಳ್ಳೆಯ ಕಾರ್ಯಕ್ರಮ.

—ಸಿಹಿಮೊಗೆ ರಮೇಶ್, ಮೈಸೂರು

## 'ಪುಟ್ಟ ಗೌರಿ ಮದುವೆ' ಪೀಸ್ ಪೀಸ್

'ಪುಟ್ಟ ಗೌರಿ ಮದುವೆ' ಕಂಟಿನ್ಯೂಟಿ ಇಲ್ಲದೆ 'ಪೀಸ್ ಪೀಸ್' ಆಗಿ ಹೊರ ಹೊಮ್ಮುತ್ತಿದೆ. ಕಲಾವಿದರ ಕೊರತೆಯಿಂದ ಈ ರೀತಿ ಆಗುತ್ತಿದೆಯೇನೋ? ಅವರೂ ಬೇರೆ ಧಾರಾವಾಹಿಗಳಲ್ಲಿ ಕೂಡ ಅಭಿನಯಿಸಬೇಕಲ್ಲವೆ? ಅವರಿಗೆ ಗೊತ್ತು, ಹೇಗಿದ್ದರೂ 'ಪುಟ್ಟ ಗೌರಿ ಮದುವೆ' ಮುಗಿಯಲು ಇನ್ನೂ ಸಾಕಷ್ಟು ಸಮಯ ಬೇಕು ಎಂದು. ಧರ್ಮತೇಜ ಮತ್ತು ಸಾಗರ ಅವರನ್ನು 'ಬಫೂನ್'ಗಳಾಗಿ ಬಿಂಬಿಸಿದ್ದೀರಿ. ಅವರಿಗೆ ಈ ಶಿಕ್ಷೆ ಸಾಲದು, ಇನ್ನೂ ಪಕ್ಕಾ ಶಿಕ್ಷೆ ಆಗಬೇಕು. ಮಹೇಶ ಮತ್ತು ಹಿಮ ಮಧುಚಂದ್ರಕ್ಕೆಂದು ಹೊರಟವರು ಬೇರೆ ಬೇರೆ ಆಗಲು ಕಾರಣವೇನು? ಗೌರಿ, ಕರಿಷ್ಮಳಾಗಿ ಅಷ್ಟು ಬೇಗನೆ, ಅಷ್ಟು ಐಶ್ವರ್ಯವಂತಳಾಗಿದ್ದು ಹೇಗೆ, ಏನಿದರ ಗುಟ್ಟು? ಕುಸುಮಾ ಮತ್ತು ಬೆಟ್ಟಗೂ ಒಂದು ಅವಕಾಶ ಕೊಡಿ. ಆದಷ್ಟು ಬೇಗ 'ಪುಟ್ಟ ಗೌರಿ ಮದುವೆ'ಯನ್ನು ಮುಗಿಸಿ. ಪ್ರೇಕ್ಷಕರಿಗೆ ತುಂಬಾ ನಿರಾಸೆಯಾಗಿದೆ.

—ತಿರುಕ್ಕೋವಿಲೂರ್, ಮೈಸೂರು

## ಉದಯ ನ್ಯೂಸ್ ಲಾಂಛನ ಬದಲಿಸಲಿ

ಕನ್ನಡದ ಮೊದಲ ನ್ಯೂಸ್ ಚಾನೆಲ್ 'ಉದಯ' ಪ್ರಸಾರ ನಿಲ್ಲಿಸಿ ತಿಂಗಳುಗಳಾಗಿವೆ. ಆದರೂ ಟಿವಿ ಪರದೆ ಮೇಲೆ 'ಉದಯ ನ್ಯೂಸ್' ಲಾಂಛನ ಕಾಣುತ್ತಿದ್ದು, ಅದರಲ್ಲಿ ನ್ಯೂಸ್ ಬದಲಿಗೆ ಚಲನಚಿತ್ರಗಳು ಮತ್ತು ಚಿತ್ರಗೀತೆಗಳು ನಿರಂತರವಾಗಿ ಪ್ರಸಾರವಾಗುತ್ತಿದ್ದು, ವೀಕ್ಷಕರು ಗೊಂದಲದಲ್ಲಿದ್ದಾರೆ. ಅನಿವಾರ್ಯ ಕಾರಣಗಳಿಂದ ಪ್ರಸಾರ ಬಂದಾಗಿರಬಹುದು ಎಂದು ಕಾಯುತ್ತಾರೆ. ಚಾನೆಲ್‌ನವರು ವಾಸ್ತವವನ್ನು ವೀಕ್ಷಕರಿಗೆ ಅಧಿಕೃತವಾಗಿ ತಿಳಿಸಬೇಕು ಮತ್ತು ಗೊಂದಲ ಉಂಟು ಮಾಡುವ ಲಾಂಛನವನ್ನು ಶೀಘ್ರ ಬದಲಿಸಿ ಚಾನೆಲ್‌ಗೆ ಸೂಕ್ತ ಹೆಸರನ್ನು ನೀಡಬೇಕು.

—ರಮಾನಂದ ಶರ್ಮಾ, ಬೆಂಗಳೂರು

## ಹಾಸ್ಯ ಧಾರಾವಾಹಿಗಳಿಗೆ ಬರವೇ?

ಹಿಂದಿಯ '& ಟಿವಿ' ಚಾನೆಲ್‌ನಲ್ಲಿ 'ಬಾಭೀಜೀ ಘರ್ ಪರ್ ಹೈ' ಎಂಬುದು ಒಂದು ಸುಂದರ ಹಾಸ್ಯ ಧಾರಾವಾಹಿ. ಕಳೆದ 3–4 ವರ್ಷಗಳಿಂದ ರಾತ್ರಿ 10–30ಕ್ಕೆ ಪ್ರಸಾರವಾಗುವ ಈ ಹಾಸ್ಯ ಧಾರಾವಾಹಿ, ಕೇವಲ 8–10 ಪಾತ್ರಗಳಿಂದ, ಒಂದು ಸಣ್ಣ ಸೆಟ್‌ನಿಂದ, ಅದರ ನಿತ್ಯ ನೂತನ ಕಥಾ ವಸ್ತುವಿನಿಂದ ಅರ್ಧ ಗಂಟೆ ಕಾಲ ವೀಕ್ಷಕರನ್ನು ಹಿಡಿದಿಡುತ್ತದೆ. ನಮ್ಮ ಖಾಸಗಿ ಚಾನೆಲ್‌ಗಳು ಇದನ್ನು ನೋಡಿ ಕಲಿಯಲು ಸಾಕಷ್ಟು ಇದೆ. ದ್ವಂದ್ವಾರ್ಥದ ಸಂಭಾಷಣೆಯಿಲ್ಲದೇ ಪ್ರೇಕ್ಷಕರನ್ನು ನಕ್ಕು ನಗಿಸುವ ಇಂತಹ ಧಾರಾವಾಹಿಗಳನ್ನು ನೀಡಲು ಕನ್ನಡದ ಚಾನೆಲ್‌ಗಳೂ ಪ್ರಯತ್ನ ಪಟ್ಟರೆ ಕ್ರೈಂ ಸ್ಟೋರಿಗಳಿಂದ ಮುಕ್ತರಾಗಿ, ರಾತ್ರಿ ನಗು ನಗುತ್ತಾ ನಿದ್ದೆ ಮಾಡಬಹುದು.

—ಶಿವಮೊಗ್ಗ ರಮೇಶ್, ಮೈಸೂರು

## ಕೃಷ್ಣನಿಲ್ಲದ ನಂದಗೋಕುಲ...

'ಸರಿಗಮಪ' ದ ಹೊಸ ಸೀಸನ್ ಡಿ. 10 ರಂದು ಪ್ರಾರಂಭವಾಯಿತು. ವಿಜಯ ಪ್ರಕಾಶ್, ಅರ್ಜುನ್ ಜನ್ಯ, ಪ್ರವೇಶವಾದಾಗ ಕರತಾಡನಗಳು ಜೋರಾಗಿ ಕೇಳಿ ಬಂದವು. ತ್ರಿಮೂರ್ತಿಗಳಲ್ಲಿ ರಾಜೇಶ್ ಕೃಷ್ಣನ್ ಬದಲಾಗಿ ಗುರು ಹಂಸಲೇಖರವರ ಆಗಮನವಾಗಿದೆ. ಅವರು ಕೃಷ್ಣನ್ ಜಾಗಕ್ಕೆ ಗೌರವ ನೀಡಿದ್ದು ಸಂತಸ. ಹಾಡುಗಾರರು ಎಲ್ಲರೂ ಹಾಡುತ್ತಾರೆ. ಆದರೆ ಕೆಲವರ ಸಿರಿಕಂಠದ ಮಾಧುರ್ಯ ದೈವೀದತ್ತವಾದುದು. ಅಂತಹ ಸಿರಿಕಂಠದ ನಮ್ಮ ರಾಜೇಶ್ ಕೃಷ್ಣನ್ ಮತ್ತೊಮ್ಮೆ ಬಂದು ಝೀ ವಾಹಿನಿಯನ್ನು ಸೇರಿಕೊಳ್ಳಲಿ. ತ್ರಿಮೂರ್ತಿಗಳು ಮೊದಲಿನಂತೆ ಒಂದಾಗಿ 'ಸರಿಗಮಪ' ಕಾರ್ಯಕ್ರಮ ನಡೆಸಿಕೊಡಲಿ ಎಂಬುದು ನಮ್ಮ ಬಯಕೆ.

—ಲಲಿತಾ ಅಂಬಾಗಿಲು, ಉಪ್ಪುಂದ